ಪ್ರದರ್ಶನ ಮೇಳದಲ್ಲಿ ಸೀಮಿತ ಮಳಿಗೆಗಳಿಗೆ ಮಾತ್ರ ಅವಕಾಶ । ವ್ಯಾಪರಿಗಳಿಗೆ ಬೇಸರ


# ಮಾವು ಮೇಳದಲ್ಲಿ ದೊರೆಯದ ಅವಕಾಶ

**ಬೆಂಗಳೂರು:** ಮಾವು ಬೆಳೆಗಾರರಿಗೆ ಉತ್ತಮ ದರದೊಂದಿಗೆ ಉತ್ತೇಜನ ನೀಡಲು ಹಾಗೂ ಮಧ್ಯವರ್ತಿಗಳ ಹಾವಳಿ ತಪ್ಪಿಸುವ ಸಲುವಾಗಿ ತೋಟಗಾರಿಕಾ ಇಲಾಖೆಯು ಆಯೋಜಿಸಿರುವ ಮಾವು ಮಾರಾಟ ಹಾಗೂ ಪ್ರದರ್ಶನ ಮೇಳದಲ್ಲಿ ಸೀಮಿತ ಮಳಿಗೆಗಳಿಗೆ ಮಾತ್ರ ಅವಕಾಶ ನೀಡಿರುವುದು ರೈತರು ಹಾಗೂ ವ್ಯಾಪಾರಿಗಳಿಗೆ ಬೇಸರವನ್ನುಂಟು ಮಾಡಿದೆ.

ಈ ವರ್ಷ ಮಳೆಯಿಲ್ಲದೆ, ನೀರಿನ ಕೊರತೆ, ತೀವ್ರವಾದ ಬಿಸಿಲಿನ ನಡುವೆ ಈ ಬಾರಿ ಇಳುವರಿ ತೀವ್ರ ಕಳಪೆಯಾಗಿದ್ದು, ವ್ಯಾಪಾರದ ಮೇಲೆ ಗಂಭೀರವಾದ ಪರಿಣಾಮವನ್ನುಂಟು ಮಾಡಿದೆ. ಆದರೆ ನಿರೀಕ್ಷಿತ ಫಸಲು ಬಾರದಿದ್ದರೂ ಸಿಕ್ಕ ಫಸಲಿನೊಂದಿಗೆ ಮಾವು ಮೇಳದಲ್ಲಿ ಭಾಗವಹಿಸಲು ಆಗಮಿಸಿದರೆ ಅಧಿಕಾರಿಗಳು ಸೀಮಿತ ಮಳಿಗೆಗಳಿಗೆ ಮಾತ್ರ ಅವಕಾಶ ನೀಡಿದ್ದು, ಮೇಳದಲ್ಲಿ ಭಾಗವಹಿಸಲು ಆಗಮಿಸಿದ ವ್ಯಾಪಾರಿ ಹಾಗೂ ರೈತರಿಗೆ ತೀವ್ರ ಬೇಸರವನ್ನುಂಟು ಮಾಡಿದೆ.

ಮಾವು ಮಾರಾಟಗಾರರು ಮಾತನಾಡಿ, ಮಾವು ಋತುಮಾನದ ಹಣ್ಣಾಗಿದ್ದು, ಸಾಮಾನ್ಯವಾಗಿ ಬೆಲೆ ಸ್ವಲ್ಪ ಹೆಚ್ಚಿದ್ದರೂ ಸಹ ಗ್ರಾಹಕರು ಈ ಹಣ್ಣನ್ನು ಖರೀದಿಸುತ್ತಾರೆ. ಆದರೆ, ಈ ವರ್ಷ, ಇಳುವರಿ ಉತ್ತಮವಾಗಿಲ್ಲ. ಹವಾಮಾನ ಪರಿಸ್ಥಿತಿಗಳಿಂದಾಗಿ ಹಣ್ಣುಗಳು ಉತ್ತಮ ರೀತಿಯಲ್ಲಿ ಬೆಳೆಯಲು ಸಾಧ್ಯವಾಗಿಲ್ಲ, ಪ್ರಕ್ರಿಯೆಯಲ್ಲಿ ಬಹಳಷ್ಟು ಹಣ್ಣುಗಳು ಹಾಳಾಗುತ್ತವೆ. ಈ ವರ್ಷ ಮಾವಿನ ತಳಿಗಳ ಬಗ್ಗೆ ಗ್ರಾಹಕರು ಹೆಚ್ಚು ಸಂತಸಗೊಂಡಿಲ್ಲ ಎಂದು ಹೇಳಿದ್ದಾರೆ.

ಈ ವರ್ಷ ಮಾರಾಟಗಾರರು ಹೆಚ್ಚಾಗಿದ್ದು, ಇಳುವರಿ ಕಡಿಮೆಯಾಗಿದೆ. ಎಲ್ಲರೂ ಒಂದೇ ರೀತಿಯ ಮಾವಿನ ಹಣ್ಣಿನಿಂದ ಲಾಭ ಗಳಿಸಲು ಬಯಸುತ್ತಾರೆ.



### ನಿರ್ದಿಷ್ಟ ಪ್ರದೇಶದ ರೈತರಿಗೆ ಮಾತ್ರ ಅವಕಾಶ

ವಾರ್ಷಿಕವಾಗಿ ಆಯೋಜಿಸುವ ಈ ಮೇಳದಿಂದ ರಾಜ್ಯದ ರೈತರ ಒಂದು ಭಾಗ ಮಾತ್ರ ಪ್ರಯೋಜನ ಪಡೆಯುತ್ತದೆ. ಕೆಲವು ನಿರ್ದಿಷ್ಟ ಪ್ರದೇಶದ ರೈತರಿಗೆ ಮಾತ್ರ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ ನೀಡಲಾಗು ತ್ತಿದೆ. ಹೀಗಿರುವಾಗ ಮೇಳ ಆಯೋಜಿಸುವು ದರಲ್ಲಿ ಅರ್ಥವೇನಿದೆ? ಬೆಂಗಳೂರಿನಲ್ಲಿ ಗ್ರಾಹಕರ ಸಂಖ್ಯೆ ಹೆಚ್ಚಿರುವುದರಿಂದ ನಾವು ವಿವಿಧ ಜಿಲ್ಲೆಗಳಿಂದ ಬೆಂಗಳೂರಿಗೆ ಪ್ರಯಾಣಿಸುತ್ತೇವೆ. ನಮ್ಮ ಮಾವಿಗೆ ಇಲ್ಲಿ ಆದ್ಯತೆ ನೀಡದಿದ್ದರೆ ಬೇರೆಲ್ಲಿ ದೊರೆಯುತ್ತದೆ ಎಂದು ಮಾವು ಮಾರಾಟಗಾರರು ಪ್ರಶ್ನಿಸಿದ್ದಾರೆ.

### ಕರ್ನಾಟಕದ ರೈತರಿಗೆ ಮಾತ್ರ ಅವಕಾಶ

ಸ್ಥಳೀಯ ಸಹಭಾಗಿತ್ವವನ್ನು ಹೆಚ್ಚಿಸಲು ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ ಮತ್ತು ತೋಟಗಾರಿಕಾ ಇಲಾಖೆಯು ಎಲ್ಲಾ ಮಳಿಗೆಗಳನ್ನು ರಾಜ್ಯದ ರೈತರು ಮತ್ತು ವ್ಯಾಪಾರಿಗಳಿಗೆ ಮಾತ್ರ ನೀಡಲು ನಿರ್ಧರಿಸಿದೆ. ಈ ಬಾರಿಯ ಮೇಳದಲ್ಲಿ ಸುಮಾರು 60 ಮಳಿಗೆಗಳಿದ್ದು, ಇವೆಲ್ಲವೂ ಕರ್ನಾಟಕದ ರೈತರಿಗೆ ಮಾತ್ರ ನೀಡಲಾಗುತ್ತಿದೆ. ಈ ಮಳಿಗೆಗಳಲ್ಲಿ ಸುಮಾರು 15 ಬಗೆಯ ಹಲಸಿನ ಹಣ್ಣುಗಳನ್ನೂ ಒಳಗೊಂಡಿರುತ್ತವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮಾವು ಮೇಳ ಆಯೋಜಿಸುತ್ತಿರುವ ಅಧಿಕಾರಿಗಳಿಗೆ ಈ ವರ್ಷದ ಇಳುವರಿ ಸ್ಥಿತಿಗತಿ ಗೊತ್ತಿದೆ. ಅಧಿಕಾರಿಗಳು ಮಳಿಗೆಗಳನ್ನು ವಿಸ್ತರಿಸಬೇಕು. ಅಂತಿಮವಾಗಿ ಎಲ್ಲರಿಗೂ ಪ್ರಯೋಜನಕಾರಿಯಾಗುವಂತೆ ಯೋಜನೆಯನ್ನು ರೂಪಿಸಬೇಕು. ಮೆಳಕ್ಕೆ ಆಗಮಿಸಿದ ಗ್ರಾಹಕರು ಉತ್ತಮ ವಿಧದ ಹಣ್ಣುಗಳನ್ನು ರಿಯಾಯಿತಿ ದರದಲ್ಲಿ ದೊಡ್ಡ ಪ್ರಮಾಣದಲ್ಲಿ ಖರೀದಿಸುತ್ತಾರೆ.ಆದರೆ ಮಾವು ಮೇಳದಲ್ಲಿ ಮಳಿಗೆ ಹಾಕಲು ನಮಗೆ ಅವಕಾಶ ಸಿಕ್ಕಿಲ್ಲ. ನಮ್ಮ ಸ್ಥಿತಿ ಏನಾಗಬೇಕು ಎಂದು ಪ್ರಶ್ನಿಸಿದ್ದಾರೆ.

Vishwavani Pg.02

# ಈರುಳ್ಳಿ ಶೇಖರಣೆಗೆ ವಿಕಿರಣ ತಂತ್ರಜ್ಞಾನದ ಮೊರೆ

ನವದೆಹಲಿ (ಪಿಟಿಐ): ಬಾಬಾ ಪರಮಾಣು ಸಂಶೋಧನಾ ಸಂಸ್ಥೆಯು (ಬಿಎಆರ್‌ಸಿ) ಅಭಿವೃದ್ಧಿಪಡಿಸಿರುವ ವಿಕಿರಣ ತಂತ್ರಜ್ಞಾನದ ಮೂಲಕ ಪ್ರಸಕ್ತ ವರ್ಷದಲ್ಲಿ 1 ಲಕ್ಷ ಟನ್‌ನಷ್ಟು ಈರುಳ್ಳಿ ಕಾಪು ದಾಸ್ತಾನು ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ದೀರ್ಘಕಾಲದವರೆಗೆ ಈರುಳ್ಳಿ ಶೇಖರಿಸಿದರೆ ಮೊಳಕೆಯೊಡೆಯುತ್ತದೆ. ಇದರಿಂದ ಹೆಚ್ಚಿನ ನಷ್ಟವಾಗಲಿದೆ. ಇದನ್ನು ತಪ್ಪಿಸಲು ಸರ್ಕಾರವು ಈ ತಂತ್ರಜ್ಞಾನದಡಿ ಸಂಸ್ಕರಣೆಯ ಪ್ರಮಾಣ ಹೆಚ್ಚಿಸಲು ತೀರ್ಮಾನಿಸಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯವು ತಿಳಿಸಿದೆ.

‘ಶೇಖರಣೆ ಸಮಸ್ಯೆ ಹಾಗೂ ಪೂರೈಕೆ ಕೊರತೆಯಿಂದಾಗಿ ಈರುಳ್ಳಿ ಬೆಲೆಯಲ್ಲಿ ಏರಿಳಿತ ಸಹಜ. ಹಾಗಾಗಿ, ದೀರ್ಘಕಾಲದವರೆಗೆ ಕೆಡದಂತೆ ಇಡಲು ಹಾಗೂ ಶೇಖರಣೆ ಸಂದರ್ಭದಲ್ಲಿನ ನಷ್ಟ ತಪ್ಪಿಸಲು ವಿಕಿರಣ ತಂತ್ರಜ್ಞಾನ ನೆರವಾಗಲಿದೆ. ಈರುಳ್ಳಿ ಸಂಗ್ರಹಿಸಲು ಈ ತಂತ್ರಜ್ಞಾನ ಅಳವಡಿಸಿಕೊಂಡಿರುವ 50 ಶೈತ್ಯಾಗಾರಗಳನ್ನು ಗುರುತಿಸಲಾಗಿದೆ’ ಎಂದು ಸಚಿವಾಲಯದ ಕಾರ್ಯದರ್ಶಿ ನಿಧಿ ಖರೆ ಅವರು, ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

Prajavani Pg.12

# ಲಾಲ್‌ಬಾಗಲ್ಲಿ ಇಂದಿನಿಂದ ಮಾವು-ಹಲಸು ಮೇಳ

## ರಿಯಾಯಿತಿ ಘೋಷಿಸದ ತೋಟಗಾರಿಕೆ ಇಲಾಖೆ



• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಸಸ್ಯಕಾಶಿ ಲಾಲ್‌ಬಾಗ್‌ನಲ್ಲಿ ಮೇ 24ರಿಂದ ಜೂನ್ 10ರವರೆಗೆ ಮಾವು, ಹಲಸು ಮೇಳ ನಡೆಯಲಿದೆ.

ಮೇಳವನ್ನು ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ಆಯೋಜಿಸಿದ್ದು, ಗ್ರಾಹಕರಿಗೆ ಹಣ್ಣುಗಳನ್ನು ಖರೀದಿಸಲು ಅನುಕೂಲ ವಾಗುವಂತೆ 74 ಮಳಿಗೆಗಳನ್ನು ಮಾವು ಬೆಳೆಗಾರರಿಗೆ, 9 ಮಳಿಗೆ ಹಲಸು ಬೆಳೆ ಗಾರರಿಗೆ ಮತ್ತು 14 ಮಳಿಗೆಗಳನ್ನು ಇತರೆ ಹಣ್ಣಿನ ಉತ್ಪನ್ನಗಳ ಮಾರಾಟಕ್ಕೆ ಒದಗಿಸಲಾಗಿದೆ. ಮೇಳ ಪ್ರತಿದಿನ ಬೆಳಗ್ಗೆ 7 ರಿಂದ ಸಂಜೆ 7 ಗಂಟೆವರೆಗೆ ನಡೆಯಲಿದೆ. ಮಾವು, ಹಲಸನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡುವುದಾಗಿ ಘೋಷಿಸಿಲ್ಲ.

ಈ ಮೇಳದಲ್ಲಿ ಸಹಜವಾಗಿ ಮಾಗಿದ ಅಥವಾ ಇಥಲೀನ್ ಉಪಚರಿಸಿ ಮಾಗಿಸಿದ ಹಣ್ಣುಗಳನ್ನಷ್ಟೆ ಮಾರಾಟಕ್ಕೆ ಅವಕಾಶ ಕಲ್ಪಿಸಲಾಗಿದೆ. ಬಾದಾಮಿ, ಮಲ್ಲಿಕಾ, ಅಮ್ರಪಾಲಿ, ದಶೇರಿ, ಬಂಗನಪಲ್ಲಿ, ರಸಪುರಿ; ಇಮಾಮ್‌ಪಸಂದ್, ಸಕ್ಕರೆಗುತ್ತಿ, ಕಾಲಪಾಡ್, ಕೇಸರ್, ಮಲಗೋವ, ಸೇಂದೂರ, ತೋತಾಪುರಿ, ನೀಲಂ ತಳಿಗಳು ಹಾಗೂ ಆಕಾರ, ಗಾತ್ರದ ಕಾರಣದಿಂದ ಭೌಗೋಳಿಕ ಸೂಚನೆ(ಜಿಐ) ಟ್ಯಾಗ್ ಪಡೆದಿರುವ ಉತ್ತರಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಕರಿಇಶಾದ್ ಮಾವು ಮೇಳದಲ್ಲಿ ಲಭ್ಯವಿರಲಿದೆ. ಹಲಸಿನ ಹಣ್ಣುಗಳು ಕೂಡ ಮಾರಾಟಕ್ಕೆ ಅವಕಾಶ ನೀಡಲಾಗಿದೆ.

KannadaPrabha Pg.03

# ಮಾವು-ಹಲಸು ಮೇಳ

**ಬೆಂಗಳೂರು:** ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮವು ತೋಟಗಾರಿಕೆ ಇಲಾಖೆಯ ಸಹಯೋಗದೊಂದಿಗೆ ಮೇ 24ರಿಂದ ಜೂ.10ರವರೆಗೆ ಲಾಲ್‌ಬಾಗ್‌ನಲ್ಲಿ ಮಾವು ಮತ್ತು ಹಲಸು ಮೇಳವನ್ನು ಹಮ್ಮಿಕೊಳ್ಳಲಾಗಿದೆ.



ಮಾವು ಮತ್ತು ಹಲಸು ಬೆಳೆಗಾರರು ಮತ್ತು ಗ್ರಾಹಕರ ನಡುವೆ ನೇರ ಸಂಪರ್ಕ ಕಲ್ಪಿಸಿ ಬೆಳೆಗಾರರಿಗೆ ಯೋಗ್ಯ ಬೆಲೆ ಹಾಗೂ ಗ್ರಾಹಕರಿಗೆ ಗುಣಮಟ್ಟದ ಹಣ್ಣುಗಳನ್ನು ಮಾರಾಟ ಮಾಡುವ ನಿಟ್ಟಿನಲ್ಲಿ ಮೇಳವನ್ನು ಆಯೋಜಿಸಲಾಗಿದ್ದು, ಮೇಳವು 18 ದಿನಗಳ ಕಾಲ ನಡೆಯಲಿದೆ.

ಮೇಳದಲ್ಲಿ ಬಾದಾಮಿ, ಮಲ್ಲಿಕಾ, ನೀಲಂ, ತೋತಾಪುರಿ, ರಸಪುರಿ, ಸಕ್ಕರೆ ಗುತ್ತಿ ಸೇರಿದಂತೆ ಇತರೆ ತಳಿಗಳ ಮಾವು, ಹಲಸಿನ ಮಾರಾಟ ಮಾಡಲಾಗುತ್ತದೆ. ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮವು ಗ್ರಾಹಕರಿಗಾಗಿ ಬೆಳಗ್ಗೆ 7ರಿಂದ ಸಂಜೆ 7ರವರೆಗೆ ಅವಕಾಶ ಕಲ್ಪಿಸಲಾಗಿದೆ. ಗ್ರಾಹಕರು ಈ ಮೇಳದ ಸದುಪಯೋಗ ಪಡೆದುಕೊಳ್ಳಬೇಕೆಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಸಿ.ಜಿ.ನಾಗರಾಜ್ ತಿಳಿಸಿದ್ದಾರೆ.

SamyukthaKarnataka Pg.03

# Vegetable prices soar in Bengaluru

Vegetable vendors in the city are reporting a steep rise in prices due to rains and low yields. Beans was the most expensive vegetable Thursday at around Rs 250/kg. Sourcing from Andhra and Maharashtra has further driven up prices. P2

Times of India Pg.01,02

**FOOD FOR THOUGHT** ICMR's Diet Plan – My Plate For The Day – Costs You ₹100-150 Daily

# HEALTH IS WEALTH, but will households feel the pinch?

Niranjan.Kaggere@timesgroup.com


TIMES SPECIAL

Amid the clamour over changing lifestyles, food habits and health impacts, the Indian Council of Medical Research (ICMR) and the National Institute of Nutrition (NIN) have notified a new diet chart for Indians. With more than 50% of the ailments in today's population being attributed to unhealthy diets and lifestyle changes, ICMR-NIN has suggested 17 dietary guidelines with the right balance of proteins, carbohydrates, and other nutrients to fight non-communicable disease such as obesity, diabetes, and hypertension.

Cautioning people about ultra-processed and preservative-rich packaged foods, the expert nutritionists' recommendation — 'My Plate for the Day' — consists of micronutrients sourced from different food sources such as vegetables, fruits, leafy vegetables, roots, and tubers. Experts have also suggested consuming cereals, pulses, millets, meat, eggs, nuts, oil seeds, and milk products.

As per the ICMR-NIN diet chart, an average man with a BMI of 18 to 23 would require 2,080 kilocalories a day along with crude protein of 72 grams. Similarly, a woman with BMI of 18 to 23 would require 1,660 kcal daily. But how much would this 'ideal diet' cost a person, given the current rate of retail inflation?

**TOI** spoke to multiple traders and other stakeholders assessing the cost of a nutritious meal.




Graphic | MR Rajashekar

# Fish catch dips by 43% in DK dist

Deepthi.Sanjiv@timesgroup.com

Climate change has significantly affected the annual fish catch in Dakshina Kannada district this year, leading to a decline in production. According to Dakshina Kannada fisheries department, the total fish production for 2023-24 stands at 1.8 lakh metric tonnes — a 43% decline compared to the previous year.

This is a marked decrease from previous years: It was 2.2 metric tonnes in 2020-21, 2.9 lakh in 2021-22, and 3.3 lakh in 2022-23. In fact, because of fish shortage last financial year, 30-35% of trawl boats at Mangaluru Old Port were already anchored by Nov 2023.

Dilip Kumar, deputy director of fisheries, Dakshina Kannada, told **TOI** that the impact of El Niño is evident as the significant temperature difference has caused fish shoals to migrate. The nutrient inflow was poor. "We are hopeful that if the region receives good rainfall and river runoff and nutrient mix-up is good, next season will be better," he said.

Experts attribute the fall in fish catch to changes in rainfall patterns and extreme heat. According to experts from ICAR-Central Marine Fisheries Research Institute, there has been an improvement in fish catch. However, there are concerns regarding potential impacts later in the year. The La Niña effect, expected during monsoon, could lead to above-normal rainfall.

The fish catch was lower during April-May, likely due to El Niño which contributed to this year's record-high temperatures.